# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ವಿಲಾಸ ಕಾಂಬಳೆ | ಫ್ರಾಸಾ-34 |
| ತಂದೆ ಹೆಸರು | : | ಕಲ್ಲಪ್ಪ | ಚಾಸಾ-12 |
| ವಯಸ್ಸು | : | 35 ವರ್ಷ | |
| ಉದ್ಯೋಗ | : | ಖಾಸಗಿ ಕೆಲಸ ಈ ಹಿಂದೆ ಮ್ಯಾನೇಜರ ಪ್ರಿನ್ಸ ಬಾರ | |
| ವಿಳಾಸ | : | ಕಾಂಬಳೆ ಗಲ್ಲಿ, ಮುಧೋಳ | |

ದಿಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 14.11.2019 ರಂದು ಬೆಳಿಗ್ಗೆ 8.00 ರಿಂದ 8.30 ರ ಅವಧಿಯಲ್ಲಿ ಬಾರಿನ ಬಳಿ ಪೊಲೀಸರು ಬಂದು ನನ್ನನ್ನು ಪೊಲೀಸ ಠಾಣೆಗೆ ಕರೆದುಕೊಂಡು ಹೋದರು. ಡಿ.ವಿ.ಆರ್. ನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದು, ನನಗೆ ಪೊಲೀಸರು ನೋಟೀಸ ನೀಡಿದ್ದು ಅದನ್ನು ನಿಪಿ-64 ಎಂದು ಸಾಕ್ಷಿಯ ಸಹಿಯನ್ನು ನಿಪಿ-64(ಎ) ಎಂದು ಗುರುತಿಸಲಾಯಿತು. ನನ್ನಂತೆ ಇನ್ನೊಬ್ಬ ವ್ಯಕ್ತಿ ಸಹ ಇದ್ದ. ಆ ಕುರಿತು ಮಹಜರ ಬರೆದಿದ್ದು ಅದನ್ನು ಈಗ ನೋಡಿದ್ದು ಅದನ್ನು ನಿಪಿ-65 ಎಂದು ಸಾಕ್ಷಿಯ ಸಹಿಯನ್ನು ನಿಪಿ-65(ಎ) ಎಂದು ಗುರುತಿಸಲಾಯಿತು. ಡಿ.ವಿ.ಆರ್. ನ್ನು ವಶಪಡಿಸಿಕೊಂಡ ಬಗ್ಗೆ ನಾಲ್ಕು ಛಾಯಾಚಿತ್ರಗಳನ್ನು ತೆಗೆದಿದ್ದು ಅವುಗಳಲ್ಲಿ ನಾನು ಇದ್ದೇನೆ. ಅವುಗಳನ್ನು ನಿಪಿ-66 ರಿಂದ 69 ಎಂದು ಗುರುತಿಸಲಾಯಿತು. ಡಿ.ವಿ.ಆರ್. ನ್ನು ಮುದ್ದೆಮಾಲು-24 ಎಂದು ಗುರುತಿಸಲಾಯಿತು. ಡಿ.ವಿ.ಆರ್.ನ ಮೇಲೆ ಚೀಟಿ ಅಂಟಿಸಿದ್ದು, ಅದರ ಮೇಲಿನ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-24(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎನ್.ಎಲ್.ಹೆಚ್. ಶ್ರೀ ಎಸ್.ಸಿ.ಹೆಚ್. ವಕೀಲರ ಪರವಾಗಿ ಆರೋಪಿ ಪರ**

ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# <u>ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ</u>

**<u>Spl.Case No.3/2020</u>**

| | | | |
|---|---|---|---|
| ಹೆಸರು | : | ರಾಮಪ್ಪ ಕಾಂಬಳೆ | ಫ್ರಾಸಾ-33 |
| ತಾಯಿ ಹೆಸರು | : | ದುರಗವ್ವ | ಚಾಸಾ-8 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಮೊಬೈಲ ಶಾಪ್ | |
| ವಿಳಾಸ | : | ಕಾಂಬಳೆ ಗಲ್ಲಿ, ಮುಧೋಳ | |

ದಿಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 15.10.2019 ರ ವಿಡಿಯೋ ಪೊಲೀಸರು ಸಿಸಿಟಿವಿಯಲ್ಲಿ ಇದ್ದದ್ದನ್ನು ದಿಃ 24.10.2019 ರಂದು ನನ್ನ ಸಮಕ್ಷಮ ಹೆಚ್.ಪಿ. ಪೆನಡ್ರೈವನಲ್ಲಿ ಹಾಕಿದ್ದರು. ಆ ಕುರಿತು ನಾನು ಪಂಚನಾಮೆ ಕಾಲದಲ್ಲಿ ಸಹಿ ಸಹ ಮಾಡಿದ್ದೇನೆ. ಸಾಕ್ಷಿ ಪೆನಡ್ರೈವ ನೋಡಿ ಗುರುತಿಸಿದ್ದು ಅದನ್ನು ನ್ಯಾಯಾಲಯದಲ್ಲಿ ಪೊಲೀಸರ ಲ್ಯಾಪಟಾಪನಲ್ಲಿ ಪ್ಲೇ ಮಾಡಿ ತೋರಿಸಿದ್ದು ಇದೆ. ಸದರಿ ಪಂಚನಾಮೆಯನ್ನು ನಿಪಿ-61 ಎಂದು ಸಾಕ್ಷಿಯ ಸಹಿಯನ್ನು ನಿಪಿ-61(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪೆನಡ್ರೈವ ಗಳನ್ನು ನಿಪಿ-62, 63 ಎಂದು ಗುರುತಿಸಲಾಗಿದೆ. ಆ ಕುರಿತು ಚೀಟಿ ಪೆನಡ್ರೈವ ವಶಪಡಿಸಿಕೊಂಡ ಬಗ್ಗೆ ಇದ್ದು ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-62(ಎ), 63(ಎ) ಒಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಎನ್.ಎಲ್.ಹೆಚ್. ಶ್ರೀ ಎಸ್.ಸಿ.ಹೆಚ್. ವಕೀಲರ ಪರವಾಗಿ ಆರೋಪಿ ಪರ**

ಇಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.